ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5686
ಸದಸ್ಯರ ಹೆಸರು : ಶ್ರೀ ಧರ್ಮೇಗೌಡ ಎಸ್.ಎಲ್. (ಬೀರೂರು)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕು ಬೀರೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮದಗದಕೆರೆ, ಅಯ್ಯನ ಕೆರೆಗೆ ಹೆಬ್ಬೆ ಜಲಪಾತದಿಂದ ನೀರಾವರಿ ಸೌಲಭ್ಯ ಕಲ್ಪಿ ಸುವ ಯೋಜನೆ ಸರ್ಕಾರದ ಮುಂದಿ ದೆಯೇ?	ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕು, ಬೀರೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮದಗದ ಕೆರೆಗೆ ಮಾತ್ರ ಹೆಬ್ಬೆ ಹಳ್ಳದಿಂದ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅಯ್ಯನಕೆರೆಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ.	ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ವೆಚ್ಚವೆಷ್ಟು; ಹಾಗು ಈ ಯೋಜನೆಯು ಯಾವ ಹಂತದಲ್ಲಿದೆ.	ಈ ಯೋಜನೆಯ ಅಂದಾಜು ವೆಚ್ಚ ರೂ. 80.00 ಕೋಟಿಗಳು. ಈ ಯೋಜನೆಗೆ ತಾಂತ್ರಿಕ ಸಲಹಾ ಸಮಿತಿಯು ಒಪ್ಪಿಗೆ ನೀಡಿರುತ್ತದೆ. ಯೋಜನಾ ವರದಿಗೆ ಭಾರೀ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಲಿಯ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.
ಇ.	ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು;	ಭಾರೀ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಲಿಯ ಅನುಮೋದನೆಯ ನಂತರ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮಕೈಗೊಳ್ಳಲಾಗುವುದು.
ಈ.	ಈ ಯೋಜನೆಗೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ?	ಸದ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಡಬಹುದು, ಸಾಕಷ್ಟು ಇದರಲ್ಲಿ ಕೋರ್ಟುಗಳಿಗೆ ಹೋಗಿದ್ದಾರೆ. ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಉಳಿದಂತೆ ಏನು ಸೈಟುಗಳಿವೆ ಅಷ್ಟನ್ನು ಮಾತ್ರ ಹಂಚಿಕೆ ಮಾಡಿದ್ದೇವೆ. ಅದರಲ್ಲಿ ವಿವಾದವಾಗುವಂತಹ ಸೈಟುಗಳಾವುದೂ ಇಲ್ಲ, ಮುಂದೆ ಬರತಕ್ಕಂತದ್ದರ ಬಗ್ಗೆ ತಮ್ಮ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಆದೇಶವನ್ನು ಮಾಡುತ್ತೇವೆ.

ಶ್ರೀ ಎಸ್.ಎಲ್.ಧರ್ಮೇಗೌಡ (ಬೀರೂರು): ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಸಂಬಂಧಪಟ್ಟ ಸಚಿವರನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ತಾವು ದಯಮಾಡಿ ಕರ್ನಾಟಕ ರಾಜ್ಯದಲ್ಲಿ ಬರತಕ್ಕಂತ ಬಹಳಷ್ಟು ಪ್ರಸಿದ್ಧವಾದ ಕೆರೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರತಕ್ಕಂಥ ಅಯ್ಯನಕೆರೆ, ಮದಗದಕೆರೆ ಬಹಳಷ್ಟು ಐತಿಹಾಸಿಕವಾಗಿ ಪ್ರಸಿದ್ಧವಾದಂತಹ ಕೆರೆಗಳು. ಖಾಸ್ಮಾಂಗದ ಕಾಲದ ರಾಜರುಗಳು ನಿರ್ಮಾಣ ಮಾಡಿದಂತಹ ಕೆರೆಗಳಿಗೆ 80 ಕೋಟಿ ರೂಪಾಯಿಗಳ ಪ್ರಸ್ತಾವನೆಯೊಂದಿಗೆ ತಾಂತ್ರಿಕ ಮಂಜೂರಾತಿಯನ್ನು ಮದಗದ ಕೆರೆಗೆ ಕುಡಿಯುವ ನೀರಿಗೆ ಕೊಟ್ಟಿದ್ದೇವೆಂಬ ಮಾತನ್ನು ನಿಮ್ಮ ಉತ್ತರದಲ್ಲಿ ಏನು ಹೇಳಿರುವಿರಿ ಅದರ ಜೊತೆಯಲ್ಲಿ ಇವತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರತಕ್ಕಂತಹ ಶೇಕಡ 45 ಭಾಗದ ಜನರ ಕುಡಿಯುವ ನೀರಿನ ಸಮಸ್ಯೆಯಿಂದ ಹಿಡಿದು ರೈತಾಪಿ ವರ್ಗದ ಜನರ ಸಮಸ್ಯೆಯನ್ನು ನೀಗಿದೆಯೆಂದು ಆಗುತ್ತದೆ. ಹೆಬ್ಬೆ ಜಲಪಾತದ ಯೋಜನೆಯಿಂದ 2 ಟಿಎಂಸಿ ನೀರು ಹರಿದು ಬರುವ ಸಾಧ್ಯತೆ ಇದೆ. ಆ ಸಂದರ್ಭದಲ್ಲಿ ಮದಗದ ಕೆರೆಯ ಜೊತೆಗೆ ಅಯ್ಯನಕೆರೆ ಸೇರಿಲ್ಲವೆಂಬ ಮಾತನ್ನು ಉತ್ತರದಲ್ಲಿ ಕೊಟ್ಟಿದ್ದೀರಿ. ತಾವು ದಯಮಾಡಿ ಈ ಯೋಜನೆಯನ್ನು ಕಾರ್ಯಗತ ಮಾಡುವಾಗ ಇನ್ನು 10 ಕೋಟಿ ರೂಪಾಯಿ ಹೆಚ್ಚಾಗುತ್ತದೆ ತಾಂತ್ರಿಕ ವಿಚಾರದಲ್ಲಿ ನನಗೆ ಅಷ್ಟೊಂದು ಆಲೋಚನೆಯಿಲ್ಲ. ತಾವು ಸಂಬಂಧಪಟ್ಟ ತಾಂತ್ರಿಕ ಅಧಿಕಾರಿಗಳಿಗೆ ತಿಳಿಸಿ ತಕ್ಷಣ ಮದಗದ ಕೆರೆಗೆ ಹೆಬ್ಬೆ ಜಲಪಾತದಿಂದ ಕುಡಿಯುವ ನೀರನ್ನು ಜನಗಳಿಗೆ ಹಾಗೂ ರೈತಾಪಿ ಜನಗಳಿಗೆ ಕೊಡಬೇಕೆಂದು ಯೋಜನೆಯನ್ನು ರೂಪಿಸಿದ್ದೀರಿ ಅದರೊಂದಿಗೆ ಅಯ್ಯನಕೆರೆಗೂ ಕೊಡತಕ್ಕಂತಹ ಯೋಜನೆಯನ್ನು ರೂಪಿಸಿದಲ್ಲಿ ಆ ಭಾಗದ ಜನರು ಹಾಗೂ ಸುಮಾರು 60–70 ಹಳ್ಳಿಗಳ ಜನರೂ ಸಹ ನೆಮ್ಮದಿಯಿಂದ ಬದುಕಲಿಕ್ಕೆ ಅನುಕೂಲವಾಗುತ್ತದೆ. ಹಾಗಾಗಿ ಈ ಯೋಜನೆಯಲ್ಲಿ ಅಯ್ಯನಕೆರೆಯನ್ನು ಸೇರಿಸಬೇಕೆಂದು ಸರ್ಕಾರ ಹಾಗು ಸಂಬಂಧಪಟ್ಟ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಈಗ ನಮ್ಮ ಧರ್ಮೇಗೌಡರು ಪ್ರಶ್ನೆಯನ್ನು ಕೇಳಿದರು, ಈಗಾಗಲೇ ಹೆಬ್ಬೆ ಹಳ್ಳದಿಂದ ಮದಗದಕೆರೆಗೆ ಗಾರ್ಲೆಂಡ್ ಚಾನೆಲ್ ಮಾಡಿ ಸಂತವೇರಿಯಿಂದ ಮದಗದ ಕೆರೆಗೆ ಗ್ರಾವಿಟಿ ಗ್ರೋಯಿಂಗ್‌ನಲ್ಲಿ ನೀರು ಕೊಡುವುದೆಂದು ತೀರ್ಮಾನವಾಗಿದೆ, ಅದಕ್ಕೆ 80 ಕೋಟಿ ರೂಪಾಯಿಗಳ ಅಂದಾಜು ವೆಚ್ಚವಾಗಿದೆ. ಧರ್ಮೇಗೌಡರವರು ಹಾಕಿರುವ ಪ್ರಶ್ನೆಯಂತೆ ಅದಕ್ಕೆ ಸರ್ವೆ ಕೆಲಸ ಮಾಡಿಸಿ

ಮಾನ್ಯ ಸಚಿವರು ನಮಗೆ ಮಳೆಗಾಲದಲ್ಲಿ 1.2 ಟಿಎಂಸಿ ನೀರು ಸಿಗುತ್ತದೆ. ಬೇಸಿಗೆಯಲ್ಲಿ 3000ರಿಂದ 4000 ಕ್ಯೂಸೆಕ್ಸ್ ನೀರು ಸಿಗುತ್ತದೆ. ಇವತ್ತೇನೂ ಕಡೂರು ತಾಲೂಕಿನಲ್ಲಿ 36 ಕೆರೆಗಳಿವೆ. 36 ಕೆರೆಗಳಲ್ಲಿ ನೀರು ಇಲ್ಲ, ಸಂತೆವೇರಿಯಿಂದ 3 ಕಿ.ಮೀ.ನಷ್ಟು ಬಂದ ಮೇಲೆ ಒಂದು ಬ್ಯಾರೇಜ್ ಮಾಡಿ ಎರಡು ಗುಡ್ಡಗಳ ಮಧ್ಯೆ ಒಂದು ಟನಾಲ್ ಮಾಡಿ ಅಯ್ಯನಕೆರೆಗೆ ನೀರು ಕೊಟ್ಟರೆ ಕಡೂರು ತಾಲೂಕು, ತರೀಕೆರೆ ತಾಲೂಕಿನ ಕೆರೆಗಳಿಗೆ ಅನುಕೂಲವಾಗುತ್ತದೆ, ಭಾರೀ ನೀರಾವರಿಯಷ್ಟು ನೀರು ರೈತರಿಗೆ ಹಾಗು ಜನಗಳಿಗೆ ಸಿಗುವುದಿಲ್ಲ, ಮಳೆಗಾಲ ಹಾಗೂ ಬೇಸಿಗೆ ಕಾಲದಲ್ಲಿ ತೆಂಗಿನ, ಅಡಕೆ ತೋಟಗಳನ್ನು ರೈತರು ಉಳಿಸಿಕೊಳ್ಳಬಹುದು. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದಕ್ಕೊಂದು ಸರ್ವೆ ಕಾರ್ಯವನ್ನು ಮಾಡಿಸಿ ಅಯ್ಯನ ಕೆರೆಗೆ ನೀರು ಕೊಡಬೇಕಾದ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಸಚಿವರ ಗಮನಸೆಳೆಯುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಬಹುದಿನದ ಬೇಡಿಕೆ ಈಡೇರಿರಲಿಲ್ಲ. ಆದರೆ ನಾವು ಪ್ರಯತ್ನ ಪಟ್ಟು ಸರ್ವೆ ಮಾಡಿಸಿ ಕನಿಷ್ಠ ಪಕ್ಷ ಭದ್ರ ಉಪ ಕಣಿವೆಯ ಹೆಬ್ಬಳ್ಳಿಯಿಂದ ವೇದಾವತಿ ಉಪಕಣಿವೆಯ ಮದಗದ ಕೆರೆಗೆ ಸಂಪರ್ಕ ಕಾಲುವೆಯನ್ನು ನಿರ್ಮಿಸಲು ಈಗಾಗಲೇ ಯೋಜನೆಯನ್ನು ರೂಪಿಸಲಾಗಿದೆ. ಆದರೆ ಎರಡನೇ ಯೋಜನೆಯಾದ ಅಯ್ಯನಕೆರೆಯ ಬಗ್ಗೆ ಧರ್ಮೇಗೌಡರು ಪ್ರಸ್ತಾಪಿಸುತ್ತಿದ್ದಾರೆ, ತಾವು ಕೂಡ ಹೇಳುತ್ತಿದ್ದೀರಿ. ಮೊದಲು 80 ಕೋಟಿ ರೂಪಾಯಿಗಳ ಯೋಜನೆಯನ್ನು ಪ್ರಾರಂಭ ಮಾಡೋಣ. ಇದು ಕುಡಿಯುವ ನೀರಿಗಷ್ಟೆ ಅಲ್ಲ. ಸುಮಾರು 10,588 ಎಕರೆ ಕಡೂರು ತಾಲೂಕಿನಲ್ಲಿ ನೀರಾವರಿ ಆಗುತ್ತದೆ. ಆ ರೀತಿಯ ಸೆಮಿ ಡ್ರೈ ಆಮೇಲೆ 2,162 ಎಕರೆ ರಬ್ಬಿ ಬೆಳೆಗೆ ಅನುಕೂಲವಾಗುತ್ತದೆ. ಒಟ್ಟು ಇದರ ಎಸ್ಟಿಮೇಟ್ 80 ಕೋಟಿ ರೂಪಾಯಿಗಳಾಗುತ್ತದೆ. 1.53 ಟಿಎಂಸಿ ನೀರು ಇದಕ್ಕೆ ಬಳಸಬೇಕಾಗುತ್ತದೆ.

ಇದಕ್ಕೆ ನಮ್ಮ ಟೆಕ್ನಿಕಲ್ ಕಮಿಟಿಯಿಂದ ಇದಕ್ಕೆ ಅನುಮತಿ ದೊರೆತಿದೆ. ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್ ಮುಂದೆ ಹೋಗಿದೆ. ಮಾನ್ಯ ಮುಖ್ಯಮಂತ್ರಿಗಳವರ ನೇತೃತ್ವದಲ್ಲಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುತ್ತದೆ. ಅದರಲ್ಲಿ ಕ್ಲಿಯರೆನ್ಸ್ ಮಾಡಿ ಆದಷ್ಟು ಬೇಗ ಇದನ್ನು ಪ್ರಾರಂಭಿಸುತ್ತೇವೆ. ತದನಂತರ ಎರಡನೆ ಯೋಜನೆಯಾದ ಅಯ್ಯನಕೆರೆಯನ್ನು ಸರ್ವೆ ಮಾಡಲಿಕ್ಕೆ ನಾನು ಆದೇಶವನ್ನು ಕೊಡುತ್ತೇನೆ. ಎಕನಾಮಿಕಲಿ ಫಿಸಿಬಲ್ ಇದ್ದರೆ ಅದನ್ನು ಕೂಡ ಮುಂದೆ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎಸ್.ಎಲ್.ಧರ್ಮೇಗೌಡ: ಹೆಬ್ಬೆ ಜಲಪಾತದಿಂದ ಬರುತ್ತಿರುವ ಮದಗದ ಕೆರೆಯ ಯೋಜನೆಯ ಜೊತೆಯಲ್ಲಿ ಅತಿ ಶೀಘ್ರವಾಗಿ ಮಾಡಿದರೆ ಎರಡೂ ಒಟ್ಟಿಗೆ ಬರುತ್ತದೆ. ಇದಕ್ಕೆ ಹಣವೇನೂ ಹೆಚ್ಚು ಖರ್ಚಾಗುವುದಿಲ್ಲ. ತಾಂತ್ರಿಕ ಅಧಿಕಾರಿ

ಗಳು ಮೊದಲ ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಕೈಬಿಟ್ಟಿದ್ದಾರೆ. ಈ ಬಾರಿ ಆ ತಾಂತ್ರಿಕ ಅಧಿಕಾರಿಗಳನ್ನು ಆದಷ್ಟು ಬೇಗ ವರದಿಯನ್ನು ತರಿಸಿ, ಮುಂದಿನ ಕ್ರಮವನ್ನು ಕೈಗೊಳ್ಳಬಹುದು. ಇದರಿಂದ ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದನ್ನು ಆದಷ್ಟು ಬೇಗನೆ ಮಾಡಬೇಕೆಂದು ಈ ಯೋಜನೆಯನ್ನು ನಾಲ್ಕೈದು ತಿಂಗಳುಗಳಿಂದ ರೂಪಿಸಿದ್ದೇನೆ. ಅದರ ಜೊತೆಯಲ್ಲಿ ಇದನ್ನು ಮಾಡಬೇಕೆಂದು ತಮ್ಮ ಅಭಿಪ್ರಾಯವಿದ್ದರೆ ಇದನ್ನು ತಡೆಹಿಡಿಯಬೇಕಾಗುತ್ತದೆ. ಆ ಯೋಜನೆ ಮುಗಿಯುವವರೆಗೂ ಇದನ್ನು ತೆಗೆದುಕೊಳ್ಳುವಂತಿಲ್ಲ. ಟೆಂಡರ್ ಕರೆಯುವ ಹಾಗಿಲ್ಲ. ಎಂ.ಐ.ಪಿ.ಸಿನಲ್ಲಿ ಅಪ್ರೂವ್ ಮಾಡುವ ಹಾಗಿಲ್ಲ. ಹಾಗಾಗಿ ಈ ಯೋಜನೆಯು ನಡೆಯಲಿ ಇದರ ಜೊತೆಗೆ ಆ ಯೋಜನೆಯ ಬಗ್ಗೆ ಕೂಡ ಸರ್ವೇ ಮಾಡಿಸುತ್ತೇವೆ, ನಾವು ಮಾಡುವುದಿಲ್ಲವೆಂದು ಹೇಳುವುದಿಲ್ಲ. ಎಕನಾಮಿಕಲಿ ಫೀಸಿಬಲ್ ಇದ್ದು ಜನರಿಗೆ ಸಹಾಯವಾಗುವಂತಿದ್ದರೆ ಖಂಡಿತವಾಗಿ ಅದನ್ನು ಕೂಡ ಸೈಮಲ್ಟೇನಿಯಸ್ಲಿ ಮಾಡಿಸುತ್ತೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಈಗ ಮಾನ್ಯ ನೀರಾವರಿ ಸಚಿವರು ಹೇಳಿರುವ ವಿಚಾರ ನಿಜಕ್ಕೂ ಸಮಂಜಸವಾದ ವಿಚಾರ. ಅವರು ಈ ಹೆಬ್ಬೆ ಜಲಪಾತದಿಂದ ಮದಗದ ಕೆರೆಗೆ ಇವತ್ತೇನಾದರೂ ಎಂ.ಐ.ಪಿ.ಸಿ ಸಭೆಯಲ್ಲಿ ಅಪ್ರೂವ್ ಮಾಡಿದ್ದರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಾಗು ಖರ್ಗೆಯವರು ಕಾರಣವೆಂದು ಕಡೂರು ತಾಲೂಕಿನ ಜನತೆಯ ಪರವಾಗಿ ನಾವು ಅವರುಗಳನ್ನು ಅಭಿನಂದಿಸಬೇಕಾಗುತ್ತದೆ. ಇವತ್ತು ಏನು ಮಾನ್ಯ ಎಸ್.ಎಲ್.ಧರ್ಮೇಗೌಡರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಈ ವರ್ಷವೇ ಸರ್ವೆಗಾಗಿ 10.00ಲಕ್ಷ ರೂಪಾಯಿಗಳನ್ನು ಹಣವಿಟ್ಟು ಸರ್ವೆ ಮಾಡಿಸಿ ಎರಡು ಗುಡ್ಡಗಳ ಮಧ್ಯೆ ಒಂದು ಟನಾಲ್ ಮಾಡಿ ಆ ನೀರನ್ನು ಕೊಟ್ಟರೆ ಕಡೂರು ತಾಲೂಕಿನಲ್ಲಿ ಶಾಶ್ವತವಾಗಿ ಬರವನ್ನು ನಿವಾರಣೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗು ನೀರಾವರಿ ಸಚಿವರನ್ನು ನಾನು ಬೇಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮನಸ್ಸು ಮಾಡಿದರೆ ಈ ನೀರನ್ನು ಚಿಕ್ಕನಾಯಕನಹಳ್ಳಿಯವರೆಗೂ ತರಬಹುದು. ಅದಕ್ಕಾಗಿ ನಾನು ಆಗಲೇ ಮಾತನಾಡಿದೆ. ತಾವು ಎರಡನ್ನು ಜಾಯಿಂಟ್ ಆಗಿ ಮಾಡಿಕೊಂಡು ಬಂದು ನೀರನ್ನು ಸ್ಟಾಕ್ ಮಾಡಿದರೆ ಕಡೂರು ಆದ ನಂತರ ನಮ್ಮ ಚಿಕ್ಕನಾಯಕನಹಳ್ಳಿಗೂ ನೀರನ್ನು ತರಬಹುದು, ತಾವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋಡೋಣ ಎಕ್ಸಾಮ್ ಮಾಡಿಸ್ತೀನಿ.

ಶ್ರೀ ಎಸ್.ಎಲ್.ಧರ್ಮೇಗೌಡ: 10.00 ಲಕ್ಷ ರೂಪಾಯಿಗಳನ್ನು ಸರ್ವೆ ಮಾಡಲಿಕ್ಕೆ ತೆಗೆದಿಟ್ಟರೆ ಆಗಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಗಬಹುದು.